◆ ಒಮ್ಮೆ ನಿಮ್ಮನ್ನು, 'ವಚನಕಾರರು ನಿಮ್ಮ ಮೇಲೆ ಗಾಢವಾದ ಪ್ರಭಾವ ಬೀರಿದವರು, ಅವರ ವಿಚಾರಗಳು ನಿಮ್ಮ ದೃಷ್ಟಿಕೋನಗಳನ್ನು ರೂಪಿಸಿದವೇನೋ' ಅನ್ನುವ ಪ್ರಶ್ನೆ ಕೇಳಿದಾಗ ನೀವು, 'ನನ್ನ ಮೇಲೆ ಮೊದಲು ಪ್ರಭಾವ ಬೀರಿ ನನ್ನನ್ನು ಆರಂಭದಲ್ಲಿ ರೂಪಿಸಿದವರು ನಮ್ಮ ತಾಯಿ ಮತ್ತು ಅಜ್ಜಿ' ಅಂತ ಹೇಳಿದ್ರಿ. ಅವರ ಬಗ್ಗೆ ಕೆಲವು ವಿವರಗಳನ್ನ ತಿಳಿಸಿಕೊಡಿ.

ನನ್ನ ಊರು ತುಮಕೂರು ಜಿಲ್ಲೆಯ ಕಲ್ಲೂರು ಅಂತ. ಬಾಲ್ಯದಲ್ಲಿ ನನಗೆ ತಂದೆಯ ಬೆಂಬಲ ಇರಲಿಲ್ಲ. ಅವರು ಇನ್ನೊಬ್ಬ ಹೆಂಗಸಿನ ಜೊತೆ ಇದ್ದರು. ಆದರೆ ಆತ ಬೇರೆ ಬೇರೆ ರೀತಿ ತೊಂದರೆ ಕೊಡ್ತಾನೇ ಇದ್ರು. ನಮ್ಮ ತಾಯಿ ಕೆಲಸ ಮಾಡ್ತಾ ಇದ್ರೆ ಬಂದು ಅದನ್ನ ಹಾಳು ಮಾಡೋದು, ಆಕೆಯ ಮೇಲೆ ಸಂಶಯ ಪಟ್ಟು ಆಕೇನ ಹಿಂಬಾಲಿಸೋದು, ರಾತ್ರಿಯೆಲ್ಲ ಮನೆ ಹತ್ರ ಕಾಯೋದು, ಹೀಗೆಲ್ಲಾ ಮಾಡ್ತಾ ಇದ್ರು. ನಮ್ಮ ಅಜ್ಜಿ ಎಂತಾ ಗಟ್ಟಿಗಿತ್ತಿ ಅಂದ್ರೆ, ನಮ್ಮ ತಂದೆಗೆ, 'ನನಗೆ ಕಾವಲು ಕಾಯೋಕೆ ಜನ ಇಟ್ಕೊಳ್ಳೋಕೆ ಆಗೋಲ್ಲ, ಕೂಲಿ ಇಲ್ಲದೇ ನೀನೇ ಕಾಯ್ತಿದ್ದೀಯಲ್ಲ...' ಅನ್ನೋರು.

ನಮ್ಮಜ್ಜಿಯ ಜೀವನ, ವ್ಯಕ್ತಿತ್ವ ಲೋಕೋಪಕಾರಿ ಅನ್ನೋ ಹಾಗಿತ್ತು. ಹಳ್ಳಿ ವೈದ್ಯೆಯೂ ಆಗಿದ್ರು. ನೂರಾರು ಹೆರಿಗೆಗಳನ್ನ ಮಾಡ್ಸಿದ್ರು. ಕಾಯಿಲೆಗಳಿಗೆ, ಅದರಲ್ಲೂ ಮಕ್ಕಳ ಕಾಯಿಲೆಗಳಿಗೆ ಔಷಧೀನೂ ಕೊಡ್ತಿದ್ರು. ನಮ್ಮ ಮನೇಲಿ ಜನ ಸದಾ ತುಂಬಿರ್ತಾ ಇದ್ರು. ಅವರ ತರತರದ ಕಷ್ಟ, ಸಂಕಟಗಳನ್ನ ಕೇಳ್ತಾನೇ ಬೆಳೆದೆ ನಾನು. ಕೆಲವು ಸಲ ನಮ್ಮಜ್ಜಿ ಆಮಿಷಕ್ಕೋ ಸಹಜವಾಗೋ ಬಸುರಿಯಾದ ಹೆಣ್ಣುಮಕ್ಕಳಿಗೂ ಎಷ್ಟು ಧೈರ್ಯ ತುಂಬ್ತಾ ಇದ್ರು ಅಂದ್ರೆ, 'ಆಗಿದ್ದಾಗೋಯ್ತು, ಹೋಗು, ಮಗು ಹೆತ್ತು ಜೀವನ ನಡೆಸು, ಜೀವ ಕಳ್ಕೋಬೇಡ' ಅನ್ನೋ ಮಾತು ಹೇಳ್ತಾ ಇದ್ರು. ಎಷ್ಟು ಹೆರಿಗೆ ಮಾಡ್ಸಿದ್ರೂ ನಮ್ಮಜ್ಜಿ ಒಂದ್ಸಲಾನೂ ಅವರ ಹತ್ತಿರ ದುಡ್ಡು ಇಸ್ಕೊಳ್ತಾ ಇರಲಿಲ್ಲ. ಎಲೆ ಅಡಿಕೆ, ಬಾಳೆಹಣ್ಣು ಇಷ್ಟೇ ಅವರ ಫೀಸು. ನನ್ನ ಗಮನ ಎಲ್ಲಾ ಅವರು ಕೊಡುತ್ತಿದ್ದ ಬಾಳೆಹಣ್ಣಿನ ಮೇಲೆ ಇರ್ತಿತ್ತು! ಸಂತೆ ದಿನ ಅಂತೂ ನಮ್ಮ ಮನೇಲಿ ಜನವೋ ಜನ.

ಹಾಗಂತ ಅವರೇನು ಸ್ಥಿತಿವಂತರಲ್ಲ. ಕೂಲಿ ಮಾಡಿ ಜೀವನ ನಡೆಸುವ ಪರಿಸ್ಥಿತಿ ನಮ್ಮದು. ನಾವು ಮೂಲತಃ ನೇಕಾರರು. ನೇಕಾರಿಕೆಗೆ ಪೂರಕವಾದ ಕೆಲಸಗಳನ್ನ ನಮ್ಮಜ್ಜಿ ನಮ್ಮಮ್ಮ ಮಾಡ್ತಾ ಇದ್ರು. ಆದರೂ ಕಷ್ಟದಲ್ಲಿರುವವರಿಗೆ ಆಗಬೇಕು ಅನ್ನುವ ಅವರ ಬದುಕು, ವ್ಯಕ್ತಿತ್ವ ನನ್ನ ಮೇಲೆ ಬಹಳ ಪ್ರಭಾವ ಬೀರಿತು. ಕಷ್ಟಗಳಿಗೆ ಬಗ್ಗದೆ, ಕುಗ್ಗದೆ, ಅಂತಾದ್ರಲ್ಲೂ ಆದಷ್ಟು ಬೇರೆಯವರಿಗೆ ಸಹಾಯ ಮಾಡಬೇಕು ಅನ್ನುವ ಮನಃಸ್ಥಿತಿ. ಇದರ ಜೊತೆಗೆ ಅವರ ನಿರ್ಭಯತೆಯೂ ನನಗೆ ಬಹಳ ಇಷ್ಟ. ಕಷ್ಟಗಳೂ ಹೆಣ್ಣುಮಕ್ಕಳಿಗೇ ಜಾಸ್ತಿ. ಆದ್ರೆ, ಅವುಗಳನ್ನು ಅವರು ಎದುರಿಸೋದ್ರಲ್ಲೂ ಅಷ್ಟೇ ಗಟ್ಟಿಗಿತ್ತಿಯರು. ನನಗೇ ಗೊತ್ತಿಲ್ಲದ ಹಾಗೆ, ಸಮಾಜದ ಬಹುಸಂಖ್ಯಾತರ ದುರ್ಭರವಾದ ಬದುಕು ನನ್ನ ದೃಷ್ಟಿಕೋನವನ್ನು ಕಟ್ತಾ ಹೋಯ್ತು ಅನ್ನಿಸುತ್ತೆ.

◆ ನಿಮ್ಮ ಶಾಲಾ ವಿದ್ಯಾಭ್ಯಾಸ ಹೇಗಾಯ್ತು?

ನಮ್ಮಮ್ಮ ಅಜ್ಜಿ ಇಬ್ಬರೂ ಕೂಲಿ ಕೆಲಸಕ್ಕೆ ಹೋಗ್ತಾ ಇದ್ದರು ಅಂದೆನಲ್ಲ. ಹೀಗಾಗಿ ಅವರಿಗೆ ನಾನು ಶಾಲೆಗೆ ಹೋಗೋದು ಅನುಕೂಲ ಅನ್ನಿಸ್ತು. ಏಕೆ ಅಂದರೆ, ಸಂಜೆಯ ತನಕ ನನ್ನ ಬಗ್ಗೆ ಯೋಚನೆ ಇಲ್ಲದೆ ಇರಬಹುದಾಗಿತ್ತಲ್ಲ. ಆದರೆ ನಾನೋ ಶಾಲೆಗೆ ಹೋಗೋಕೆ ಹಿಂಜರಿಯೋ ಆಸಾಮಿ ಆಗಿದ್ದೆ. ನಮ್ಮಮ್ಮ ಅಕ್ಷರಶಃ ನನ್ನನ್ನ ಕೈಕಾಲು ಕಟ್ಟಿ ಹೊತ್ತುಕೊಂಡು ಹೋಗಿ ಶಾಲೆಗೆ ಬಿಟ್ಟು ಬರ್ತಾ ಇದ್ದರು! ಹೀಗೆ ಶುರುವಾದರೂ ನನಗೆ ತುಂಬಾ ಒಳ್ಳೆಯ ಮೇಷ್ಟ್ರುಗಳು ಇದ್ದರು.

◆ ನಿಮ್ಮ ಹೈಸ್ಕೂಲು ಜೀವನ ನಿಮ್ಮ ಜೀವನದಲ್ಲಿ ಇನ್ನೊಂದು ತಿರುವು ತಂದ ಘಟ್ಟ ಅನ್ನಿಸುತ್ತೆ.